ಗಿಡಗುಂಟೆ ಹಾಗೂ ಹೂಳು ತೆಗೆದಿರುವ ಪರಿಮಾಣಗಳ ಅನುಸಾರವಾಗಿ ಅಳತೆ ಮಾಡಿ ರೂ:30.33 ಲಕ್ಷಗಳಿಗೆ ಮಾತ್ರ ಬಿಲ್ಲು ಪಾವತಿಸಲಾಗಿದ್ದು, ಬಾಕಿ ಕಾಮಗಾರಿಗಳನ್ನು ಮುಂಬರುವ ಕ್ಲೋಷರ್ ಅವಧಿಯಲ್ಲಿ ಪೂರ್ಣಗೊಳಿಸಲು ಕ್ರಮಕೈಗೊಳ್ಳಲಾಗುವುದು.

ಊ) ಕಾಮಗಾರಿಯ ಗುಣಮಟ್ಟ ನಿಯಂತ್ರಣಕ್ಕಾಗಿ ವಲಯದ ಗುಣ ನಿಯಂತ್ರಣಾ ವಿಭಾಗದಡಿ ಪರೀಕ್ಷೆಗಳನ್ನು ಮಾಡಿ ತೃಪ್ತಿಕರವೆಂದು ಪ್ರಮಾಣೀಕರಿಸಿದ್ದು, ಕಾಮಗಾರಿಗಳು ಕಳಪೆ ಮಟ್ಟದ್ದಾಗಿರುವುದಿಲ್ಲ. ಗುಣ ನಿಯಂತ್ರಣಾ ವಿಭಾಗದ ವರದಿ ಪಡೆದುಕೊಂಡು ಬಿಲ್ಲುಗಳನ್ನು ಪಾವತಿಸಲಾಗಿದೆ. ಆದಾಗ್ಯೂ ಮಾನ್ಯ ಶಾಸಕರ ದೂರಿನ ಆಧಾರದ ಮೇಲೆ ತಪ್ಪಿತಸ್ಥ ಅಧಿಕಾರಿಗಳನ್ನು ಗುರುತಿಸಿ ಶಿಸ್ತುಕ್ರಮ ಜರುಗಿಸಲಾಗುವುದು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೈಗೊಂಡ ಕಾರ್ಯಕ್ರಮಗಳು

144 : (337)

ಶ್ರೀ ಖಾದರ್.ಯು.ಟಿ (ಮಂಗಳೂರು)

ಅ) ಕಳೆದ 3 ವರ್ಷಗಳಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜವಳಿ ಇಲಾಖೆ ವತಿಯಿಂದ ಕೈಗೊಂಡ ಕಾರ್ಯಕ್ರಮಗಳು ಯಾವುವು; (ಕ್ಷೇತ್ರವಾರು ವಿವರ ಒದಗಿಸುವುದು)?

ಆ) ಈ ಜಿಲ್ಲೆಯ ನೇಕಾರರಿಗೆ ವಸತಿ ಮತ್ತು ನಿವೇಶನ ದೊರಕಿಸಿಕೊಡಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ;

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿನ ನೇಕಾರರ ಗಣತಿ ಮಾಡಲಾಗಿದೆಯೇ; ಹಾಗಿದಲ್ಲಿ, ವಿವರಗಳನ್ನು ಒದಗಿಸುವುದು ?

ಶ್ರೀ ವರ್ತೂರು ಪ್ರಕಾಶ್
(ಜವಳಿ ಸಚಿವರು)

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜವಳಿ ಕ್ಷೇತ್ರದ ಸಮಗ್ರ ಅಭಿವೃದ್ಧಿಗಾಗಿ ಕೈಮಗ್ಗ ಮತ್ತು ಜವಳಿ ಇಲಾಖೆ ವತಿಯಿಂದ ಈ ಕೆಳಕಂಡ ಯೋಜನೆಗಳಡಿ ವಿವಿಧ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಕೇಂದ್ರ ವಲಯ ಯೋಜನೆ

1. ಸಮಗ್ರ ಕೈಮಗ್ಗ ಅಭಿವೃದ್ಧಿ ಯೋಜನೆ.
2. ಮಾರುಕಟ್ಟೆ ರಫ್ತು ಉತ್ತೇಜನ ಯೋಜನೆ
3. ಆರೋಗ್ಯ ವಿಮೆ ಯೋಜನೆ.
4. ಮಹಾತ್ಮ ಗಾಂದಿ ಬುನಕರ್ ಭೀಮ ಯೋಜನೆ.
5. ಕೈಮಗ್ಗ ಉತ್ಪನ್ನಗಳ ಮಾರಾಟದ ಮೇಲೆ 10 % ರಿಬೇಟ್

ರಾಜ್ಯವಲಯ ಯೋಜನೆ

1. ವಸತಿ ಕಾರ್ಯಗಾರ.
2. ಸುವರ್ಣ ವಸ್ತ್ರನೀತಿ.
3. ವಿಶೇಷ ಗಟಕ ಯೋಜನೆ.
4. ಗಿರಿಜನ ಉಪಯೋಜನೆ.
5. ಮಿತವ್ಯಯನಿಧಿ ಯೋಜನೆ.
6. ಕೈಮಗ್ಗ ಸಹಕಾರ ಸಂಘಗಳಿಗೆ ಸಹಾಯ.
7. ಕೈಮಗ್ಗ ಉತ್ಪನಗಳ ಮಾರುಕಟ್ಟೆ ಮೇಲೆ 20% ರಿಬೇಟ್.

ಜಿಲ್ಲಾವಲಯ ಯೋಜನೆ.

ಕೈಮಗ್ಗ ಸಹಕಾರ ಸಂಘಗಳಿಗೆ ಸಹಾಯಧನ

ಕ್ಷೇತ್ರವಾರು ವಿವರಗಳು ಈ ಕೆಳಕಂಡಂತಿವೆ :

ಕ್ರ ಸಂ	ಕ್ಷೇತ್ರ	ವೆಚ್ಚ		
		2009–11	**2010–12**	**2011–13**
1	ಮಂಗಳೂರು	51.168	17.607	50.930
2	ಮಂಗಳೂರು ಉತ್ತರ	0.00	0.00	0.00
3	ಮಂಗಳೂರು ದಕ್ಷಿಣ	0.143	1.148	0.00
4	ಮುಲ್ಕಿ /ಮೂಡಬಿದ್ರೆ	20.55	8.881	140.527
5	ಬಂಟ್ವಾಳ	4.28	42.39	4.595
6	ಬೆಳ್ತಂಗಡಿ	0.00	9.84	31.045
7	ಪುತ್ತೂರು	9.45	1.93	0.00
8	ಸುಳ್ಯ	0.00	7.19	35.72
ಒಟ್ಟು		**85.591**	**88.986**	**262.817**

ಆ) 2007–08ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ/ಪಂಗಡದ ನೇಕಾರರಿಗೆ ಬನ್ನಡ್ಕ ಗ್ರಾಮ ಮಂಗಳೂರು ತಾಲ್ಲೂಕು ಇಲ್ಲಿ 2.25 ಎಕರೆ ಭೂಮಿ ಪಡೆದಿದ್ದು 54 ನಿವೇಶನಗಳನ್ನು ರಚಿಸಿ ನೇಕಾರರಿಗೆ ಹಂಚಿಕೆ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ. ಉಳಿದಂತೆ 2009–10 ರಿಂದ ಈವರೆಗೆ ಒಟ್ಟು 30 ನೇಕಾರರ ಫಲಾನುಭವಿಗಳಿಗೆ ವಸತಿ ಕಾರ್ಯಗಾರಗಳ ನಿರ್ಮಾಣಕ್ಕಾಗಿ ಅನುದಾನ ಬಿಡುಗಡೆ ಮಾಡಲಾಗಿದೆ.

ಇ) ಕ್ರೇಂದ್ರ ಸರ್ಕಾರವು 2009–10ನೇ ಸಾಲಿನಲ್ಲಿ ಕೈಮಗ್ಗ ಗಣತಿಯನ್ನು ನಡೆಸಿದ್ದು ಒಟ್ಟು 271 ನೇಕಾರರು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನೇಕಾರಿಕೆ ವೃತ್ತಿಯಲ್ಲಿ ತೊಡಗಿರುತ್ತಾರೆ.

Reply

The following schemes are being implemented for the over all development of the textile sector in Dakshina Kannada District.

Central Sector Schemes.

1. Integrated handloom development scheme.
2. Marketing and Export promotion scheme.
3. Health InsuranceScheme.
4. Mahatma Gandhi Bunakar Bima Scheme.
5. 10% rebate on Sale of handloom products.

State sector scheme.

1. Liviang cum workshed.
2. Suvarna Vasthra Neethi.
3. Special Component Plan.
4. Tribal Sub Plan.
5. Thrift Fund schme.
6. Assistance to Handloom co-operatives.
7. 20% rebate on sale of handloom products.

District Sector scheme

Assistance to Handloom co-operatives.

Constituency wise details are as under :

Sl. No	Constituency	Expenditure		
		2009-11	2010-12	2011-13
1	Mangalore	51.168	17.607	50.930
2	Mangalore North	0.00	0.00	0.00
3	Mangalore South	0.143	1.148	0.00
4	Mulki/Moodabidre	20.55	8.881	140.527

Sl. No	Constituency	Expenditure		
5	Bantwala	4.28	42.39	4.595
6	Belthangadi	0.00	9.84	31.045
7	Puttur	9.45	1.93	0.00
8	Sulya	0.00	7.19	35.72
	Total	**85.591**	**88.986**	**262.817**

During 2007-08 2.25 acres land has been purchased in Bannadka village in Mangalore tq for development of weavers colony for SC/ST weavers. Development of 54 sites is under progress. From the year 2009-10 onwards funds has been released for construction of 30 living cum worksheds.

Government of India have conducted Handloom Census during 2009-10. Totally 271 weavers are engaged in weaving activity.

ಜಲಾನಯನ ಅಭಿವೃದ್ಧಿ ಕಾಮಗಾರಿಗಳು
108 (180)

ಶ್ರೀ ಸತ್ಯನಾರಾಯಣ ಎಂ. (ಚಾಮುಂಡೇಶ್ವರಿ)

ಅ) ಜಲಾನಯನ ಅಭಿವೃದ್ಧಿ ಇಲಾಖೆಯಲ್ಲಿ ಕಳೆದ 3 ವರ್ಷಗಳಿಂದ ಎಲ್ಲಾ ಯೋಜನೆಗಳಡಿಯಲ್ಲಿ ಬಿಡುಗಡೆ ಮಾಡಿದ ಅನುದಾನವೆಷ್ಟು; ಮೈಸೂರು ತಾಲ್ಲೂಕಿನಲ್ಲಿ ಅನುಷ್ಠಾನಗೊಳಿಸಲಾದ ಕಾಮಗಾರಿಗಳಾವುವು; (ಮೈಸೂರು ತಾಲ್ಲೂಕಿನ ವರ್ಷವಾರು ಹಾಗೂ ಕಾಮಗಾರಿವಾರು ಮಾಹಿತಿಯನ್ನು ನೀಡುವುದು)

ಆ) ಈ ಯೋಜನೆಗಳಡಿಯಲ್ಲಿ ಎಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ;